128	ಗೋವಿಂದರಾಜು ಜಾನು ನಾಯಕ್, ಕೃಷಿ ಸಹಾಯಕರು, ಕೃಷಿ ಸಹಾಯಕ ನಿರ್ದೇಶಕರ ಕಛೇರಿ ಜೋಯಿಡ, ಉತ್ತರ ಕನ್ನಡ ಜಿಲ್ಲೆ.	ನ್ಯಾಯಾಲಯದಲ್ಲಿ ಬಾಕಿ ಇದೆ.
129	ಹನುಮಂತಪ್ಪ ಯಲ್ಲಪ್ಪ ತುರಾಯಿ, ಸಿ.ಪಿ.ಐ., ಸಿಸಿ ವೃತ್ತ, ಉತ್ತರ ಕನ್ನಡ ಜಿಲ್ಲೆ.	ನ್ಯಾಯಾಲಯದಲ್ಲಿ ಬಾಕಿ ಇದೆ.

1299 (177) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂದಿರಾನಗರದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣವು ಶೋಚನೀಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಅಲ್ಲಿರುವ ಶೌಚಾಲಯಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳದಿರುವುದು ನಿಜವೇ;

ಇ) ಇಂದಿರಾನಗರದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣವನ್ನು ಮೆಟ್ರೋ ರೈಲ್ ಸಂಸ್ಥೆಗೆ ಹಸ್ತಾಂತರಿಸಲಾಗುತ್ತಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಬೆಂಗಳೂರಿನ ಇಂದಿರಾನಗರದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣವು ಶೋಚನೀಯ ಸ್ಥಿತಿಯಲ್ಲಿರುವುದಿಲ್ಲ. ಈ ಸಂಕೀರ್ಣವನ್ನು ಸುಸ್ಥಿತಿಯಲ್ಲಿಡಲು ನಿರಂತರವಾಗಿ ನಿರ್ವಹಣೆ ಮಾಡಲಾಗು ತ್ತಿರುತ್ತದೆ.

ಆ) ಅಲ್ಲಿರುವ ಶೌಚಾಲಯಗಳನ್ನು ದಿನಂಪ್ರತಿ ಶುಚಿಗೊಳಿಸಿ ಸ್ವಚ್ಛವಾಗಿಡಲಾಗುತ್ತಿದೆ.

ಇ) ಇಲ್ಲ.

ಈ) ಪ್ರಶ್ನೆಯೇ ಉದ್ಭವಿಸುವುದಿಲ್ಲ.

1295 (174) : ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06, 2006–07, 2007–08ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿಗೆ ಎಲ್ಲ ಮೂಲಗಳಿಂದ ಬಂದ ಆದಾಯವೆಷ್ಟು; (ಮೂಲಗಳ ವಿವರ ಆದಾಯ ಪ್ರತ್ಯೇಕವಾಗಿ ತಿಳಿಸುವುದು).

ಆ) ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಂದ ಆದಾಯದಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ಕೆಲಸ ಮತ್ತು ಅಂದಾಜು ವೆಚ್ಚ ವಿವರ ನೀಡುವುದು);

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಒಟ್ಟು ರೂ.27,79,21,893 (ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ).

ಆ) (ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ).

ಅನುಬಂಧ–1

ಕ್ರ ಸಂ.	ವರ್ಷ	ಶೀರ್ಷಿಕೆ	ರಕಂ
ಅ	**2005–06**	1. ಕಟ್ಟಡ ಬಾಡಿಗೆ, ಮನೆ ಟ್ಯಾಕ್ಸ್ ಕಟ್ಟಡ ಪರವಾನಿಗೆ ಫೀಜ್.	851555.00
		2. ಉತ್ತಮತೆಯ ಶುಲ್ಕ, ಖಿಲ್ಲಾ ಚಾಗ ಶುಲ್ಕ.	10334019.00
		3. ಆಶ್ರಯ ಯೋಜನೆ ಫಲಾನುಭವಿಗಳಿಂದ.	709737.00
		4. ಇತರೇ, ನಿವೇಶನದ ಮೊತ್ತ ಇತರೇ ಬಡ್ಡಿ,	2547168.00